# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ 470/2020

| ಚಾಸಾ ಃ | 1 | ಪ್ರಾಸಾಃ- | 1 |
|---|---|---|---|
| ಹೆಸರು | ನಾಗಮಣಿಬಾಯಿ | | |
| ಗಂಡನ ಹೆಸರು | ವಿಜಯಕುಮಾರನಾಯ್ಕ | | |
| ವಯಸ್ಸು | 22 | | |
| ಉದ್ಯೋಗ | ಮನೆ ಕೆಲಸ | | |
| ವಿಳಾಸ | ಅಂಜವಾಡಿದೊಡ್ಡಿ ಗ್ರಾಮ | | |

- - - - - - - - - - - - - - - - - - - - - - - - - - - - - - -

**ದಿಃ07.12.2021ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-2 ನನ್ನ ತಾಯಿ. ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. 1 ನೇ ಆರೋಪಿ ನನ್ನ ಗಂಡ. 2 ನೇ ಆರೋಪಿ ನನ್ನ ಅತ್ತೆ ಮತ್ತು 3 ನೇ ಆರೋಪಿ ನನ್ನ ತಾತ.

ದಿನಾಂಕ.07.12.2015 ರಂದು ನನ್ನ ಮದುವೆಯು 1 ನೇ ಆರೋಪಿಯ ಜೊತೆ ಆಗಿದ್ದು, ಮದುವೆಯ ನಂತರ 6 ತಿಂಗಳ ವರೆಗೆ ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದು, ಆನಂತರ ನನಗೆ ಕಿರುಕುಳವನ್ನು ಆರೋಪಿತರು ಕೊಟ್ಟಿರುತ್ತಾರೆ. ಆರೋಪಿತರು ನನಗೆ ಮಕ್ಕಳು ಆಗಲಿಲ್ಲವೆಂದು ಕಿರುಕುಳವನ್ನು ನೀಡಿರುತ್ತಾರೆ. ನನ್ನ ಮದುವೆಯನ್ನು ಶಿವನಹಳ್ಳಿಯ ದೇವಸ್ಥಾನದಲ್ಲಿ 2 ಮತ್ತು 3 ನೇ ಆರೋಪಿತರು, ಚಾಸಾ-3, 5 ರಿಂದ 7 ರವರು ಒಪ್ಪಿ

ಮದುವೆಯನ್ನು ಮಾಡಿಸಿರುತ್ತಾರೆ. ಮದುವೆಯಾದ 6 ತಿಂಗಳ ನಂತರ ನನಗೆ ಆರೋಪಿತರು ಹೊಡಿಬಡಿ ಮಾಡಿದ್ದು, ನಾನು ಅಡುಗೆ ಮನೆಯ ಕೆಲಸವನ್ನು ಮಾಡುವುದು ಬೇಡ ಹೋಗು ಎಂದು ಹೇಳಿರುತ್ತಾರೆ. ಊಟ ತಿಂಡಿಯನ್ನು ಕೊಡುತ್ತಿರಲಿಲ್ಲ, ಸ್ನಾನಕ್ಕೆ ನೀರು ಸೋಪು ಹಾಗೂ ಶ್ಯಾಪುವನ್ನು ಕೊಡುತ್ತಿರಲಿಲ್ಲ ಹಾಗೂ ಶೌಚಲಯವನ್ನು ಬಳಸಲು ಬಿಡುತ್ತಿರಲಿಲ್ಲ. ಗೌರಿಹಬ್ಬಕ್ಕೆ ನನ್ನನ್ನು ಚಾಸಾ-2 ರವರು ಕರೆದುಕೊಂಡು ಬಂದಾಗ ಆರೋಪಿತರು ನನ್ನನ್ನು ರೂಮಿನಲ್ಲಿ ಕೂಡಿಹಾಕಿದ್ದರು. ನಂತರ ನಮ್ಮ ಅಮ್ಮ ನನ್ನನ್ನು ಸ್ನಾನ ಮಾಡಿಸಿ ಮನೆಗೆ ಕರೆದುಕೊಂಡು ಬಂದು ನಂತರ ರಾಮನಗರದಲ್ಲಿ ದೂರನ್ನು ಕೊಟ್ಟಿರುತ್ತೇವೆ. ಆಗ ಆರೋಪಿತರು ಸಹ ಅಲ್ಲಿಗೆ ಬಂದಿದ್ದರು. ನಾವು ರಾಮನಗರದಲ್ಲಿ ದಿ.2.20.2017 ರಂದು ದೂರನ್ನು ಕೊಟ್ಟಿರುತ್ತೇನೆ.

ಸ್ಥಳಕ್ಕೆ ನನ್ನ ತಾಯಿ ಮತ್ತು ನನ್ನ ತಂದೆ ಬಂದಿದ್ದರು.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಅವರ ಪಾಟೀ ಸವಾಲನ್ನು ಮಾಡಲು ಅವಕಾಶ ಕೋರಿದ್ದು, ನೀಡಲಾಯಿತು.**

**ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು ಮತ್ತು ನನ್ನ ತಾಯಿ ದಿ.19.12.2017 ರಂದು ಕನಕಪುರ ಪುರ ಪೊಲೀಸ್ ಠಾಣೆಗೆ ಹಾಜರಾಗಿ ಆರೋಪಿತರ ವಿರುದ್ದ ನನಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ಕೊಟ್ಟಬಗ್ಗೆ ದೂರನ್ನು ಕೊಟ್ಟಿರುತ್ತೇನೆಂದರೆ ಸರಿ. ಒಂದು ವರ್ಷ ಆದರೂ ಮಕ್ಕಳು ಆಗಿರುವುದಿಲ್ಲ ನನ್ನನ್ನು ಏಕೆ ನೋಡಿಕೊಳ್ಳಬೇಕು ಎಂದು ಹೇಳಿರುತ್ತಾರೆಂದು ದೂರನ್ನು ನೀಡಿರುತ್ತಾರೆಂದರೆ ಸರಿ. ದಿ.20.12.2017 ರಂದು ಕನಕಪುರದ 3 ನೇ ಆರೋಪಿಯ ಮನೆಯ ಬಳಿ ಪೊಲೀಸರು ಬಂದು ನನಗೆ ಪಂಚನಾಮೆಗೆ ಸಾಕ್ಷಿಯಾಗುವಂತೆ ಕೇಳಿರುತ್ತಾರೆಂದರೆ ಸರಿ. ಆದೇ ದಿನ 11:30 ರಿಂದ 12:00 ಗಂಟೆ ಸಮಯದ ವರೆಗೆ ಪಂಚನಾಮೆಯನ್ನು

ಸಾಕ್ಷಿಗಳ ಸಮಕ್ಷಮ ಬರೆದು ನಾನು ಹಾಜರು ಮಾಡಿದ ಲಗ್ನ ಪತ್ರಿಕೆಯನ್ನು ಪೊಲೀಸರು ತಮ್ಮ ವಶಕ್ಕೆ ಪಡೆದಿರುತ್ತಾರೆಂದರೆ ಸರಿ. ಸದರಿ ದೂರು ಹಾಗೂ ಪಂಚನಾಮೆಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳನ್ನು ನಿಪಿ-1 ಮತ್ತು 2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ಹಾಗೂ ಮೂರು ಪೋಟೋಗಳನ್ನು ತೋರಿಸಿದ್ದು, ಅವುಗಳನ್ನು ಪೊಲೀಸರು ಪಂಚನಾಮೆ ಸಮಯದಲ್ಲಿ ವಶಪಡಿಸಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ. ಸದರಿ ಲಗ್ನ ಪತ್ರಿಕೆ ಹಾಗೂ ಮೂರು ಪೋಟೋಗಳನ್ನು ನಿಪಿ-3 ರಿಂದ 6 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :-</u>

<u>ಆರೋಪಿ ಪರ ವಕೀಲರು ಹಾಜರಿದ್ದು, ಪ್ರಾಸಾ-1 ರವರ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ನ್ಯಾಯದ ಹಿತದೃಷ್ಟಿಯಿಂದ ಪ್ರಾಸಾ-1 ರವರ ಪಾಟೀ ಸವಾಲನ್ನು ಮುಂದಿನ ಮುದ್ದತ್ತಿಗೆ ಮುಂದುಡಲಾಯಿತು.</u>

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.

ಓ ಹೇ ಕೇ ಸ ಇ